**ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂರವರ ನ್ಯಾಯಾಲಯ, ಪೊನ್ನಂಪೇಟೆ.**

**ಸಿ.ಸಿ.ನಂ.59/2026**

**ಪಿರ್ಯಾದಿ** : ರಾಜ್ಯ ಸರ್ಕಾರ,
ಪೊನ್ನಂಪೇಟೆ ಪೋಲೀಸ್ ಠಾಣೆ.

**ವಿರುದ್ದ**

**ಆರೋಪಿ** : ಶ್ರೀ ಶಕೀರ್ ಎ,
ಪ್ರಾಯ 43 ವರ್ಷ
ವಾಸಃ ಪಂಪನಾಡ್ ಅಂಚೆ,
ಪೀಲಿಮೆಡ್, ವಯ್ನಾಡ್, ಕೇರಳ.

**ಆರೋಪಣೆ**

ಶ್ರೀ ಶ್ರೀನಾಥ್ ಎ,. ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ಆದ ನಾನು ಆರೋಪಿತರಾದ ನಿಮ್ಮ ಮೇಲೆ ದೋಷಾರೋಪಿಸುವುದೇನೆಂದರೆಃ

ದಿನಾಂಕ 07.12.2025ರಂದು ಸಮಯ ರಾತ್ರಿ 10.00 ಗಂಟೆಗೆ ಪೊನ್ನಂಪೇಟೆ ಪೋಲೀಸ್ ಠಾಣಾ ಸರಹದ್ದಿಗೆ ಸೇರಿದ ಬೇಗೂರು ಗ್ರಾಮದ ಸಾರ್ವಜನಿಕ ರಸ್ತೆಯಲ್ಲಿ ಸಾಕ್ಷಿ 1 ಅರುಣ್ ಶಿವನ್ ಮತ್ತು ಸಾಕ್ಷಿ 4ಅನಿಲ್ ರವರು ಕೆಎಲ್.08.ಬಿಯು.9061ರ ರಾಯಲ್ ಎನ್ ಫೀಲ್ಡ್ ಬೈಕಿನಲ್ಲಿ ಮತ್ತು ಸಾಕ್ಷಿ 2 ಅಮಲ್ ಜೋರ್ಜ್ ಮತ್ತು ಸಾಕ್ಷಿ 3 ವಿಷ್ಣು ರವರು ಕೆಎಲ್.58.ಎಃ.2538ರ ಪಲ್ಸರ್ ಬೈಕಿನಲ್ಲಿ ಕೇರಳ ರಾಜ್ಯದಿಂದ ಬೆಂಗಳೂರಿಗೆ ಹೋಗಲು ಬರುತ್ತಿರುವಾಗ, ಆರೋಪಿಯಾದ ನೀವು ತಮ್ಮ ಭಾಪ್ತು ಕೆಎಲ್.37.ಜಿ.1202 ರ ಕೇರಳ ರಾಜ್ಯದ ಬಸ್ಸನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಸಾಕ್ಷಿ 1 ರವರು ಚಾಲಿಸುತ್ತಿದ್ದ ಬೈಕಿಗೆ ಡಿಕ್ಕಿ ಪಡಿಸಿ ಅಪಘಾತ ಪಡಿಸಿರುತ್ತೀರಿ ಎಂಬುದಾಗಿರುತ್ತದೆ. ಆ ಕಾರಣ ಬಿ.ಎನ್.ಎಸ್ ಕಲಂ 281 ರಡಿಯಲ್ಲಿ ದಂಡಿಸಲ್ಪಡುವ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆತೆಯಲ್ಲಿ ಎಸಗಿರುತ್ತೀರೆಂದು ನಿಮ್ಮ ಮೇಲೆ ಆಪಾದಿಸಲಾಗಿದೆ.

ಎರಡನೆಯದಾಗಿ, ಮೇಲೆ ಹೇಳಲಾದ ದಿನ, ಸ್ಥಳ, ಸಮಯ ಮತ್ತು ಸಂದರ್ಭದಲ್ಲಿ ಆರೋಪಿಯಾದ ನೀವು ಅಪಘಾತ ಪಡಿಸಿದ ಪರಿಣಾಮ ಸಾಕ್ಷಿ 1 ರವರಿಗೆ ಸಾಮಾನ್ಯ ಮತ್ತು ಗಂಭೀರ ಸ್ವರೂಪದ ಗಾಯಗಳಾಗಿರುತ್ತವೆ. ಆ ಕಾರಣ ಬಿ.ಎನ್.ಎಸ್ ಕಲಂ 125(ಎ) ಮತ್ತು 125(ಬಿ) ರಡಿಯಲ್ಲಿ ದಂಡಿಸಲ್ಪಡುವ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆತೆಯಲ್ಲಿ ಎಸಗಿರುತ್ತೀರೆಂದು ನಿಮ್ಮ ಮೇಲೆ ಆಪಾದಿಸಲಾಗಿದೆ.

ಪ್ರಶ್ನೆ 1: ನಿಮಗೆ ಓದಿ ಹೇಳಲಾದ ಆರೋಪವನ್ನು ಅರ್ಥಮಾಡಿಕೊಂಡಿದ್ದೀರಾ?

ಉತ್ತರ :ಅರ್ಥವಾಯಿತು.

ಪ್ರಶ್ನೆ 2: ನಿಮ್ಮ ಮೇಲೆ ಹೊರಿಸಲಾದ ಆರೋಪವನ್ನು ಒಪ್ಪಿಕೊಳ್ಳುತ್ತೀರಾ ಅಥವಾ ವಿಚಾರಣೆಯಾಗಲೇಬೇಕೆ?

ಉತ್ತರ:ತಪ್ಪಾಯಿತು, ದಂಡ ಕಟ್ಟುತ್ತೇನೆ.

ಮೇಲ್ಕಂಡ ಎಲ್ಲಾ ಆಪಾದನೆಗಳನ್ನು ನನ್ನ ಸಮಕ್ಷಮ ಓದಿ ಹೇಳಿ ಅವರ ಹೇಳಿಕೆಯನ್ನು ಪಡೆದುಕೊಂಡು ಸತ್ಯವಾಗಿದೆ ಎಂದು ದೃಢೀಕರಿಸುತ್ತೇನೆ.

ಸ್ಥಳಃ ಪೊನ್ನಂಪೇಟೆ,
ದಿಃ-26-03-2026

sd/-
**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ**
**ಪೊನ್ನಂಪೇಟೆ.**